# www.karunaduexams.com

ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಫೆಬ್ರವರಿ ,23,2017

www.karunaduexams.com

1. ಸಾರ್ವಜನಿಕ ವಲಯದ ಯಾವ ಬ್ಯಾಂಕ್ ಡಿಜಿಟಲ್ ಪಾವತಿಗೋಸ್ಕರ "Bataua" ಹೆಸರಿನ ಮೊಬೈಲ್ ವ್ಯಾಲೆಟ್ ಬಿಡುಗಡೆಗೊಳಿಸಿದೆ?

ಅ) ಪಂಜಾಬ್ ನ್ಯಾಷನಲ್ ಬ್ಯಾಂಕ್

ಆ) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

ಇ) ಒರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್

ಈ) ಭಾರತೀಯ ಸ್ಟೇಟ್ ಬ್ಯಾಂಕ್

ಒರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್

ಒರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ ತನ್ನ ಗ್ರಾಹಕರಿಗೆ 75ನೇ ಸಂಸ್ಥಾಪನ ದಿನದ ಅಂಗವಾಗಿ Bataua ಮೊಬೈಲ್ ವ್ಯಾಲೆಟ್ ಬಿಡುಗಡೆಗೊಳಿಸಿದೆ.

2. "ವಿಶ್ವಸಂಸ್ಥೆಯ ವಿಶ್ವ ಸಾಮಾಜಿಕ ನ್ಯಾಯ ದಿನ"ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಫೆಬ್ರುವರಿ 19

ಆ) ಫೆಬ್ರುವರಿ 20

ಇ) ಫೆಬ್ರುವರಿ 21

ಈ) ಫೆಬ್ರುವರಿ 22

ಫೆಬ್ರುವರಿ 20

ವಿಶ್ವಸಂಸ್ಥೆಯ ವಿಶ್ವ ಸಾಮಾಜಿಕ ನ್ಯಾಯ ದಿನ"ವನ್ನು ಪ್ರತಿವರ್ಷ ಫೆಬ್ರುವರಿ 20 ರಂದು ಆಚರಿಸಲಾಗುತ್ತದೆ. "Preventing conflict and sustaining peace through decent work" ಇದು ಈ ವರ್ಷದ ಧ್ಯೇಯವಾಕ್ಯ.

3. ಇತ್ತೀಚೆಗೆ ನಿಧನರಾದ "ಬನಶ್ರೀ ಸೇನ್ ಗುಪ್ತ"ಯಾವ ರಾಜ್ಯದ ಪ್ರಸಿದ್ಧ ಗಾಯಕಿ?

ಅ) ಒಡಿಶಾ

ಆ) ಕೇರಳ

ಇ) ಪಶ್ಚಿಮ ಬಂಗಾಳ

ಈ) ಜಾರ್ಖಂಡ್

ಪಶ್ಚಿಮ ಬಂಗಾಳ

ಬಂಗಾಳಿ ಭಾಷೆಯ ಪ್ರಸಿದ್ಧ ಗಾಯಕ ಬನಶ್ರೀ ಸೇನ್ ಗುಪ್ತ ಅವರು ಕಲ್ಕತ್ತಾದಲ್ಲಿ ನಿಧನರಾದರು. ಬನಶ್ರೀ ಅವರು ತಮ್ಮ ಮಧುರ ಕಂಠದಿಂದ ಜನಪ್ರಿಯರಾಗಿದ್ದರು. ಬೆಂಗಾಳಿ, ಹಿಂದಿ, ಅಸ್ಸಾಮಿ ಮತ್ತು ಒಡಿಯಾ ಸಿನಿಮಾಗಳಿಗೆ ತಮ್ಮ ಧ್ವನಿಯನ್ನು ನೀಡಿದ್ದರು.

www.karunaduexams.com

4. 2017 ಬರ್ಲಿನ್ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ "ಇಂಟರ್ನ್ಯಾಷನಲ್ ಫೆಡರೇಷನ್ ಆಫ್ ಆರ್ಟ್ ಸಿನಿಮಾ (CICAE)" ಪ್ರಶಸ್ತಿಯನ್ನು ಪಡೆದುಕೊಂಡ ಭಾರತೀಯ ಸಿನಿಮಾ ಯಾವುದು?

ಅ) ತಿಥಿ

ಆ) ನ್ಯೂಟನ್

ಇ) ಜಲ್

ಈ) ಅಲ್ಲಮ

ನ್ಯೂಟನ್

ರಾಜಕೀಯ ವಿಡಂಬನಾತ್ಮಕ ಸಿನಿಮಾ "ನ್ಯೂಟನ್"ಗೆ 2017 ಬರ್ಲಿನ್ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ "ಇಂಟರ್ನ್ಯಾಷನಲ್ ಫೆಡರೇಷನ್ ಆಫ್ ಆರ್ಟ್ ಸಿನಿಮಾ (CICAE)" ಪ್ರಶಸ್ತಿ ಲಭಿಸಿದೆ.

5. "2017 ರಾಷ್ಟ್ರೀಯ ಜೀವವೈವಿಧ್ಯ ಕಾಂಗ್ರೆಸ್ (National Biodiversity Congress)" ಯಾವ ರಾಜ್ಯದಲ್ಲಿ ನಡೆಯಲಿದೆ?

ಅ) ಗೋವಾ

ಆ) ಕೇರಳ

ಇ) ಹರಿಯಾಣ

ಈ) ಕರ್ನಾಟಕ

ಕೇರಳ

"2017 ರಾಷ್ಟ್ರೀಯ ಜೀವವೈವಿಧ್ಯ ಕಾಂಗ್ರೆಸ್" ಕೇರಳದ ತಿರುವನಂತಪುರಂನಲ್ಲಿ ಫೆಬ್ರುವರಿ 22 ರಿಂದ ನಡೆಯಲಿದೆ. ಕೇರಳ ರಾಜ್ಯ ಜೀವವೈವಿಧ್ಯ ಮಂಡಳಿ ಈ ಕಾಂಗ್ರೆಸ್ ಅನ್ನು ಆಯೋಜಿಸುತ್ತಿದೆ.

6. 2017 ಬರ್ಲಿನ್ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ "ಗೋಲ್ಡನ್ ಬೇರ್ (Golden Bear)" ಪ್ರಶಸ್ತಿಯನ್ನು ಗೆದ್ದುಕೊಂಡ ಸಿನಿಮಾ ಯಾವುದು?

ಅ) ಬ್ರೈಟ್ ನೈಟ್ಸ್

ಆ) ಆನ್ ಬಾಡಿ ಅಂಡ್ ಸೋಲ್

ಇ) ಕ್ಲೋಸ್ ನಿಟ್

ಈ) ದಿ ಅದರ್ ಸೈಡ್ ಆಫ್ ಹೋಪ್

ಆನ್ ಬಾಡಿ ಅಂಡ್ ಸೋಲ್

www.karunaduexams.com

ಹಂಗೇರಿಯ “ಆನ್ ಬಾಡಿ ಅಂಡ್ ಸೋಲ್” ಸಿನಿಮಾಗೆ ಗೋಲ್ಡನ್ ಬೇರ್ ಪ್ರಶಸ್ತಿ ಲಭಿಸಿದೆ. ಅಲ್ಲದೇ ಇನ್ನಿತರ ಎರಡು ಪ್ರಶಸ್ತಿಗಳು ಸಹ ಈ ಸಿನಿಮಾಗೆ ನೀಡಲಾಗಿದೆ.

7. ______ ರಂದು “ಕೇಂದ್ರ ಅಬಕಾರಿ ದಿನ (Central Excise Day)”ವನ್ನು ಆಚರಿಸಲಾಗುತ್ತದೆ?
ಅ) ಫೆಬ್ರುವರಿ 22
ಆ) ಫೆಬ್ರುವರಿ 23
ಇ) ಫೆಬ್ರುವರಿ 24
ಈ) ಫೆಬ್ರುವರಿ 25
ಫೆಬ್ರುವರಿ 23 ರಂದು ಕೇಂದ್ರ ಅಬಕಾರಿ ದಿನವನ್ನು ಆಚರಿಸಲಾಗುವುದು. ಕೇಂದ್ರ ಅಬಕಾರಿ ಮತ್ತು ಉಪ್ಪು, ಕಾಯಿದೆ-1944 ರಲ್ಲಿ ಜಾರಿಗೆ ಬಂದ ದಿನವನ್ನು ಕೇಂದ್ರ ಅಬಕಾರಿ ದಿನವೆಂದು ಆಚರಿಸಲಾಗುತ್ತದೆ.

8. ಯಾವ ರಾಜ್ಯ ಸರ್ಕಾರಿ ಅಧಿಕಾರಿಗಳಿಗೆ ಭ್ರಷ್ಟಾಚಾರ ವಿರೋಧಿ ತರಭೇತಿಯನ್ನು ಕಡ್ಡಾಯಗೊಳಿಸಲಿದೆ?
ಅ) ಕೇರಳ
ಆ) ಮಧ್ಯ ಪ್ರದೇಶ
ಇ) ರಾಜಸ್ತಾನ
ಈ) ಗುಜರಾತ್
ಕೇರಳ
ಕೇರಳ ಸರ್ಕಾರ ತನ್ನ ರಾಜ್ಯದ ಸರ್ಕಾರಿ ಅಧಿಕಾರಿಗಳಿಗೆ ಆರು ದಿನಗಳ ಭ್ರಷ್ಟಾಚಾರ ವಿರೋಧಿ ತರಭೇತಿಯನ್ನು ಕಡ್ಡಾಯಗೊಳಿಸಲಿದೆ. ದೇಶದಲ್ಲೇ ಇದೆ ಮೊದಲ ಬಾರಿಗೆ ಇಂತಹ ತರಭೇತಿಯನ್ನು ಜಾರಿಗೆ ತರಲಾಗುತ್ತಿದೆ.

9. 2016-17 ಇಂಟರ್ನ್ಯಾಷನಲ್ ಮರ್ಕ್ಯೂರಿ ಪ್ರಶಸ್ತಿಯನ್ನು ಗೆದ್ದುಕೊಂಡ ಭಾರತೀಯ ಸಂಸ್ಥೆ ಯಾವುದು?
ಅ) ಎಂಟರ್ಪ್ರೆನರ್ಶಿಪ್ ಡೆವೆಲಪ್ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ
ಆ) ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್
ಇ) ಸೆಂಟ್ರಲ್ ಗ್ಲಾಸ್ ಅಂಡ್ ಸೆರಾಮಿಕ್ ರಿಸರ್ಚ್ ಇನ್ಸ್ಟಿಟ್ಯೂಟ್
ಈ) ಸೆಂಟ್ರಲ್ ಸೈಂಟಿಫಿಕ್ ಅಂಡ್ ರಿಸರ್ಚ್ ಇನ್ಸ್ಟಿಟ್ಯೂಟ್
ಎಂಟರ್ಪ್ರೆನರ್ಶಿಪ್ ಡೆವೆಲಪ್ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ

www.karunaduexams.com

ಅಹಮದಬಾದ್ ಮೂಲದ ಎಂಟರ್ಪ್ರೆನರ್ಶಿಪ್ ಡೆವೆಲಪ್ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಗೆ 2016-17 ಇಂಟರ್ನ್ಯಾಷನಲ್ ಮರ್ಕ್ಯೂರಿ ಪ್ರಶಸ್ತಿಯನ್ನು ನೀಡಲಾಗಿದೆ.

10. 13ನೇ "ರಾಷ್ಟ್ರೀಯ ಕೃಷಿ ವಿಜ್ಞಾನ ಸಮಾವೇಶ (National Agriculture Science Congress)" ಅತಿಥ್ಯವಹಿಸಲಿರುವ ರಾಜ್ಯ ಯಾವುದು?

ಅ) ಕರ್ನಾಟಕ

ಆ) ತಮಿಳುನಾಡು

ಇ) ಮಹಾರಾಷ್ಟ್ರ

ಈ) ಹಿಮಾಚಲ ಪ್ರದೇಶ

ಕರ್ನಾಟಕ

13ನೇ ರಾಷ್ಟ್ರೀಯ ಕೃಷಿ ವಿಜ್ಞಾನ ಸಮಾವೇಶ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಫೆಬ್ರುವರಿ 22 ರಂದು ಆರಂಭಗೊಂಡಿತು. ನಾಲ್ಕು ದಿನಗಳ ಕಾಲ ಈ ಸಮಾವೇಶ ನಡೆಯಲಿದ್ದು, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಐಸಿಎಆರ್ ಹಾಗೂ ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರ್ ಸೈನ್ಸ್ ಜಂಟಿಯಾಗಿ ಆಯೋಜಿಸುತ್ತಿವೆ. "Climate Smart Agriculture" ಸಮಾವೇಶದ ಧ್ಯೇಯವಾಕ್ಯವಾಗಿದೆ.

www.karunaduexams.com